
**ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ**

**ಬ್ಲಾಕ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ. ಶಿವಮೊಗ್ಗ**
**ಮೌಲ್ಯಾಂಕನ ಮಾದರಿ ಪ್ರಶ್ನೆ ಪತ್ರಿಕೆ**

**ಎಂಟನೇ ತರಗತಿ ವಿಜ್ಞಾನ 50 ಅಂಕ 2 ಗಂಟೆ 30 ನಿಮಿಷ**

**I.ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ 16X1=16**

1. ಚಂದ್ರನ ದಕ್ಷಿಣ ಧ್ರುವವನ್ನು ತಲುಪಿದ ಮೊದಲ ರಾಷ್ಟ್ರ
   a.ಅಮೆರಿಕ b.ಭಾರತ c.ರಷ್ಯಾ d.ಆಸ್ಟ್ರೇಲಿಯಾ
2.ಏಕಮಾನ ವಿಸ್ತೀರ್ಣದಲ್ಲಿನ ಬಲವನ್ನು ............. ಎನ್ನುತ್ತಾರೆ.
   a. ಒತ್ತಡ b. ಘರ್ಷಣೆ c.ಸಾಂದ್ರತೆ d.ಸಂಪರ್ಕ ಬಲ.
3.ಅಶ್ರವ್ಯ ಶಬ್ದದ ಆವೃತ್ತಿಯ ವ್ಯಾಪ್ತಿ
   a.200 HZ ಗಿಂತ ಕಡಿಮೆ
   b.200 HZ ಗಿಂತ ಹೆಚ್ಚು
   c.20 HZ ಗಿಂತ ಕಡಿಮೆ
   d. 20 HZ ಗಿಂತ ಹೆಚ್ಚು
4. ಇದು ಸೌರಮಂಡಲದ ಸದಸ್ಯ ಕಾಯವಾಗಿಲ್ಲ
   a.ಕ್ಷುದ್ರಗ್ರಹ b.ಉಪಗ್ರಹ c.ನಕ್ಷತ್ರಪುಂಜ d.ಧೂಮಕೇತು
5 ಕಣ್ಣಿನೊಳಗೆ ಪ್ರವೇಶಿಸುವ ಬೆಳಕಿನ ಪ್ರಮಾಣವನ್ನು ನಿಯಂತ್ರಿಸುವ ಕಣ್ಣಿನ ಭಾಗ
   a.ವರ್ಣ ಪಟಲ
   b.ಮಸೂರ
   c.ಕಾರ್ನಿಯ
   d.ಅಕ್ಷಿಪಟಲ
6.ಈ ಕೆಳಗಿನವುಗಳಲ್ಲಿ ಯಾವುದನ್ನು ತಂತಿಯನ್ನಾಗಿ ಮಾರ್ಪಡಿಸಬಹುದು ?
   a.ಪಾಸ್ಪರಸ್ b.ಗಂಧಕ c.ಕಾರ್ಬನ್ d.ಚಿನ್ನ
7.ಬೆಂಕಿ ಆರಿಸುವವರ ಸಮವಸ್ತ್ರಗಳನ್ನು ಬೆಂಕಿ ನಿರೋಧಕವಾಗಿಸಲು ಅದಕ್ಕೆ ಈ ಪ್ಲಾಸ್ಟಿಕ್ ನ ಲೇಪನ ಮಾಡಿರುತ್ತಾರೆ,
   a.ಮೆಲಮೈನ್
   b.ಫಾಲಿಥೀನ್
   c.ಆಕ್ರಿಲಿಕ್
   d.ನೈಲಾನ್
8. ಪ್ಯಾರಾಫಿನ್ ಮೇಣವನ್ನು ಇದರ ತಯಾರಿಕೆಯಲ್ಲಿ ಬಳಸುತ್ತಾರೆ
   a.ಬಣ್ಣ b.ವ್ಯಾಸಲಿನ್ c.ಇಂಧನ d.ಬಿಟುಮೆನ್
9. ಪರೀಕ್ಷಕದ ಎರಡು ತುದಿಗಳನ್ನು ದ್ರಾವಣದಲ್ಲಿ ಮುಳುಗಿಸಿದಾಗ ಕಾಂತಸೂಚಿ ವಿಚಲನೆಯನ್ನು ತೋರಿಸುವ ದ್ರಾವಣ



   a.ವಿನೆಗರ್ ದ್ರಾವಣ b.ಸಕ್ಕರೆ ದ್ರಾವಣ c.ಅಸವಿತ ನೀರು
   d.ಯಾವುದು ಅಲ್ಲ

10. ಯುಗ್ಮಜದಲ್ಲಿ ಕಂಡು ಬರುವ ಕೋಶಕೇಂದ್ರಗಳ ಸಂಖ್ಯೆ

a.0 b.1 c.2 d.3

11. ಅಪಾಯಕ್ಕೊಳಗಾದ ಎಲ್ಲಾ ಪ್ರಾಣಿಗಳ ಮತ್ತು ಸಸ್ಯಗಳ ದಾಖಲೆ ಹೊಂದಿರುವ ಪುಸ್ತಕ

a.ಕಪ್ಪು ದತ್ತಾಂಶ ಪುಸ್ತಕ

b. ಗಿನ್ನಿಸ್ ದಾಖಲೆ ಪುಸ್ತಕ

c.ಕೆಂಪು ದತ್ತಾಂಶ ಪುಸ್ತಕ

d.ಸರ್ಕಾರಿ ದಾಖಲೆ ಪುಸ್ತಕ

12. ಈ ಯಂತ್ರದ ಬಳಕೆಯಿಂದ ಕೃಷಿಕರಿಗೆ ದೈಹಿಕ ಶ್ರಮ ಮತ್ತು ಸಮಯದ ಉಳಿತಾಯವಾಗುತ್ತದೆ.

a.ಎಡೆಕುಂಟೆ b.ನೇಗಿಲು c.ಎಲಿವೇಟರ್ d.ಕಲ್ಟಿವೇಟರ್

13. ಭಾರತದ ಮೊಟ್ಟ ಮೊದಲ ಮೀಸಲು ಅರಣ್ಯ ಇದಾಗಿದೆ.

a.ಬಂಡೀಪುರ ರಾಷ್ಟ್ರೀಯ ಉದ್ಯಾನವನ

b.ಪಚ್ಮಡಿ ವನ್ಯಜೀವಿಧಾಮ

c.ಸಾತ್ಪುರ ರಾಷ್ಟ್ರೀಯ ಉದ್ಯಾನವನ

d.ಮಾನಸ ವನ್ಯಜೀವಿಧಾಮ

14 ಇವುಗಳಲ್ಲಿ ಹಸಿರು ಮನೆ ಅನಿಲವಲ್ಲ

a.ಕಾರ್ಬನ್ ಡೈ ಆಕ್ಸೈಡ್

b.ಸಲ್ಫರ್ಡ್ ಆಕ್ಸೈಡ್


c.ಮಿಥೇನ್

d.ನೈಟ್ರೋಜನ್

15. ನೀರಾವರಿಯ ಆಧುನಿಕ ವಿಧಾನ ಇದಾಗಿದೆ.

a.ತುಂತುರು ವಿಧಾನ b.ಏತ ನೀರಾವರಿ ವಿಧಾನ c. ಸರಪಳಿ .ಪಂಪ್ d. ರಾಹಟ್

16. ಮಾನವನ ದೇಹದಲ್ಲಿ ಈ ಆಕಾರದಲ್ಲಿರುವ ಗ್ರಂಥಿಯ ಹೆಸರು ಮತ್ತು ಅದು ಸ್ರವಿಸುವ ಹಾರ್ಮೋನ್



a.ಥೈರಾಯಿಡ್- ಥೈರೊಕ್ಸಿನ್

b.ಪ್ಯಾಂಕ್ರಿಯಾಸ್ -ಇನ್ಸುಲಿನ್

c.ಅಡ್ರಿನಲ್ -ಅಡ್ರಿನಲಿನ್

d.ಪಿಟ್ಯುಟರಿ –ಬೆಳವಣಿಗೆ


**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **4X1=4**

17 ಶಬ್ದ ಮಾಲಿನ್ಯ ಎಂದರೇನು?

18 ನರಕೋಶದ ರಚನೆ ತೋರಿಸುವ ಚಿತ್ರವನ್ನು ಬರೆಯಿರಿ.

19 ರೂಪ ಪರಿವರ್ತನೆ ಎಂದರೇನು?

20 ಕೆಳಗೆ ನೀಡಿರುವ ಸರಳ ವಿದ್ಯುತ್ ಮಂಡಲದಲ್ಲಿ X ಭಾಗವನ್ನು ಕ್ರಮವಾಗಿ ರಬ್ಬರ್ ಮತ್ತು ತಾಮ್ರದ ತಂತಿ ಬಳಸಿ ಪರೀಕ್ಷಿಸಲಾಗಿದೆ ಯಾವ ಸಂದರ್ಭದಲ್ಲಿ ಬಲ್ಬ್ ಬೆಳಗುವುದಿಲ್ಲ?




**III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **6X2=12**

21. ಆಟಗಾರರು ಮುಳ್ಳುಗಳಿರುವ ಬೂಟುಗಳನ್ನು ಏಕೆ ಧರಿಸುತ್ತಾರೆ? ವಿವರಿಸಿ.

ಅಥವಾ

ಉರುಳು ಘರ್ಷಣೆಯು ಜಾರುಘರ್ಷಣೆಗಿಂತ ಕಡಿಮೆ ಇರುತ್ತದೆ. ವಿವರಿಸಿ

22. ಭೂಕಂಪ ಸಂಭವಿಸಿದ ಸಮಯದಲ್ಲಿ ನೀವು ಮನೆಯಿಂದ ಹೊರಗಿದ್ದ ಸಂದರ್ಭ ದಲ್ಲಿ ನಿಮ್ಮನ್ನು ರಕ್ಷಿಸಿಕೊಳ್ಳಲು ತೆಗೆದುಕೊಳ್ಳುವ ಮುನ್ನೆಚ್ಚರಿಕೆಯ ಕ್ರಮಗಳು ಯಾವುವು? ತಿಳಿಸಿ.

23. ನಿಯತ ಮತ್ತು ಚದುರಿದ ಪ್ರತಿಫಲನಕ್ಕಿರುವ ವ್ಯತ್ಯಾಸವನ್ನು ತಿಳಿಸಿ.

ಅಥವಾ

ಬೆಳಕಿಗೆ ಸಂಬಂಧಿಸಿದಂತೆ ಇವುಗಳನ್ನು ನಿರೂಪಿಸಿ.

1. ಪ್ರತಿಫಲನ. 2.ಚದುರುವಿಕೆ.

24. ಕೆಳಗಿನ ಸಂದರ್ಭಗಳಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯ ಪದ ಸಮೀಕರಣವನ್ನು ಬರೆಯಿರಿ

a.ತಾಮ್ರದ ಫಲಕದ ಮೇಲೆ ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ ಸುರಿದಾಗ.


b. ಕಬ್ಬಿಣದ ಮೊಳೆಗಳನ್ನು ಸಲ್ಫೇಟ್ ದ್ರಾವಣದಲ್ಲಿ ಇರಿಸಿದಾಗ

ಅಥವಾ

ಮೆಗ್ನೀಷಿಯಂ ಆಕ್ಸೈಡನ್ನು ನೀಲಿ ಮತ್ತು ಕೆಂಪು ಲಿಟ್ಮಸ್ ಕಾಗದಗಳ ಜೊತೆ ಪರೀಕ್ಷಿಸಿದೆ. ಲಿಟ್ಮಸ್ ಕಾಗದದಲ್ಲಿ ಗಮನಿಸುವ ಬದಲಾವಣೆ ಏನು? ಒಂದು ವೇಳೆ ಲಿಟ್ಮಸ್ ಕಾಗದದ ಬಣ್ಣ ಬದಲಾದಲ್ಲಿ ಅದಕ್ಕೆ ಕಾರಣವಾದ ಮೆಗ್ನೀಷಿಯಂ ಆಕ್ಸೈಡ್ನ ಲಕ್ಷಣವೇನು?

25. ಪೆಟ್ರೋಲಿಯಂ ಅನ್ನು ಕಪ್ಪು ಚಿನ್ನವೆಂದು ಕರೆಯುವರು. ವೈಜ್ಞಾನಿಕ ಕಾರಣವನ್ನು ಬರೆಯಿರಿ.

26




i.ಮೇಲಿನ ಚಿತ್ರದಲ್ಲಿ x ಅನ್ನು ಹೆಸರಿಸಿ.

ii.ಇಲ್ಲಿ ನಡೆಯುವ ಕ್ರಿಯೆಯನ್ನು ಹೆಸರಿಸಿ.

**IV. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ 3X3=9**

27 ಶುದ್ಧ ನೀರಿನ ಮೂಲಕ ವಿದ್ಯುತ್ ಪ್ರವಹಿಸುತ್ತದೆ. ಇಲ್ಲದಿದ್ದಲ್ಲಿ ಅದು ವಿದ್ಯುತ್ ವಾಹಕವಾಗಲು ಏನು ಮಾಡಬೇಕು?

ಅಥವಾ

ಸೇತುವೆಗಳಲ್ಲಿ ಬಳಸುವ ಕಬ್ಬಿಣದ ದೀರ್ಘ ಬಾಳಿಕೆಗೆ ಏನು ಮಾಡಬೇಕು? ನಿಮ್ಮ ಉತ್ತರವನ್ನು ಸಮರ್ಥಿಸಿರಿ.

28. ಮೇಣದ ಬತ್ತಿಯ ಜ್ವಾಲೆಯ ವಿವಿಧ ವಲಯಗಳನ್ನು ತೋರಿಸುವ ಚಿತ್ರ ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ.

a. ಮಧ್ಯಮ ಬಿಸಿ ಭಾಗ

b.ಅತ್ಯಂತ ಬಿಸಿ ಭಾಗ

29. ಸಸ್ಯ ಜೀವಕೋಶದ ರಚನೆ ತೋರಿಸುವ ಚಿತ್ರ ಬರೆದು ಕೆಳಗಿನ ಭಾಗಗಳನ್ನು ಗುರುತಿಸಿರಿ.

a.ಕ್ಲೋರೋಪ್ಲಾಸ್ಟ್ b.ರಸದಾನಿ

**V.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.. 1X4=4**

30 . a.ಕಾಲರಾ ರೋಗದ ನಿಯಂತ್ರಕ ಕ್ರಮಗಳು ಯಾವುವು?

b. ಸೂಕ್ಷ್ಮ ಜೀವಿಗಳಿಂದ ಉಂಟಾಗುವ ಹಾನಿಗಳನ್ನು ಬರೆಯಿರಿ

ಅಥವಾ

a.ವಿಷಮ ಶೀತ ಜ್ವರದ ನಿಯಂತ್ರಕ ಕ್ರಮಗಳನ್ನು ಬರೆಯಿರಿ.

b. ಆಹಾರ ಸಂರಕ್ಷಣೆಯ ವಿಧಾನಗಳನ್ನು ಹೆಸರಿಸಿ

**VI ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ . 1X5=5**

31. a. ಬಲ ಪ್ರಯೋಗದಿಂದ ವಸ್ತುವಿನ ಆಕಾರದಲ್ಲಿ ಬದಲಾವಣೆ ಆಗುವುದನ್ನು ತಿಳಿಸುವ ಸಂದರ್ಭಗಳಿಗೆ ಎರಡು ಉದಾಹರಣೆಗಳನ್ನು ನೀಡಿ

b.ಗುರುತ್ವಾಕರ್ಷಣೆ ಬಲ ಎಂದರೇನು? ನದಿಯ ನೀರು ಕೆಳಮುಖವಾಗಿ ಹರಿಯಲು ಯಾವ ಬಲ ಕಾರಣವಾಗುತ್ತದೆ.?